

بسم الله الرّحمٰن الرّحيم

# ಚೌಧರಿ ಹಮೀದುಲ್ಲಾಹ್ ಸಾಹಿಬ್ ಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **12-02-2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ದೀರ್ಘ ಕಾಲದಿಂದ ಜಮಾಅತಿನ ಸೇವೆ ಮಾಡುತ್ತಿದ್ದ ಸನ್ಮಾನ್ಯ ಚೌಧರಿ ಹಮೀದುಲ್ಲಾಹ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಅವರು ಕೆಲವು ದಿನಗಳ ಹಿಂದೆ ನಿಧನರಾದರು. ಅವರು ಪಾಕಿಸ್ತಾನದ ವಕೀಲುಲ್ ಅಲ್‌ಲಾ ತಹ್ರೀಕೆ ಜದೀದ್ ಆಗಿದ್ದರು. ಅವರು ಒಂದು ದೀರ್ಘಕಾಲದ ವರೆಗೆ ಸದರ್ ಮಜ್ಲಿಸ್ ತಹ್ರೀಕ್ ಜದೀದ್ ಅಂಜುಮನ್ ಅಹ್ಮದಿಯಾ ಮತ್ತು ಜಲ್ಸ ಸಾಲಾನ ಆಫೀಸರ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಿದ್ದರು. ಫೆಬ್ರವರಿ 7ರಂದು ತಾಹಿರ್ ಹಾರ್ಟ್ ಇನ್ಸ್ಟಿಟ್ಯೂಟ್‌ನಲ್ಲಿ 87ನೇ ವಯಸ್ಸಿನಲ್ಲಿ ಅವರು ನಿಧನರಾದರು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಸನ್ಮಾನ್ಯ ಚೌಧರಿ ಸಾಹಿಬ್‌ರ ತಂದೆಯ ಹೆಸರು ಬಾಬು ಮುಹಮ್ಮದ್ ಬಖ್ಷ್ ಸಾಹಿಬ್ ಮತ್ತು ತಾಯಿಯ ಹೆಸರು ಆಯಿಶ ಬೀಬಿ ಸಾಹಿಬ ಎಂದಾಗಿತ್ತು. ಭೇರದ ಆಸುಪಾಸಿನ ಪ್ರದೇಶದ ನಿವಾಸಿಗಳಾಗಿದ್ದರು. ಚೌಧರಿ ಸಾಹಿಬ್‌ರು 1934ರಲ್ಲಿ ಖಾದಿಯಾನಿನಲ್ಲಿ ಜನಿಸಿದ್ದರು. ಅವರ ತಂದೆ ಅವರ ಜನನಕ್ಕೆ ಸುಮಾರು 5 ವರ್ಷಗಳಿಗೆ ಮುಂಚೆ ಅಹ್ಮದಿಯ್ಯತ್ ಸ್ವೀಕರಿಸಿದ್ದರು.

ಚೌಧರಿ ಸಾಹಿಬ್‌ರು ತನ್ನ ಪ್ರಾಥಮಿಕ ಶಿಕ್ಷಣವನ್ನು ಖಾದಿಯಾನಿನಲ್ಲಿ ಪಡೆದಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ)ರ ವಖ್ಫ್‌ನ ಯೋಜನೆಗೆ ಲಬ್ಬೈಕ್ ಹೇಳುತ್ತಾ ಅವರ ತಾಯಿ ಅವರನ್ನು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಸನ್ನಿಧಿಗೆ ಕೊಂಡುಹೋದರು. “ಇವನು ನನ್ನ ಮಗ, ನಾನು ಇವನನ್ನು ಧರ್ಮದ ಸೇವೆಗಾಗಿ ವಖ್ಫ್ ಮಾಡುತ್ತೇನೆ” ಎಂದು ಖಲೀಫತುಲ್ ಮಸೀಹ್‌ರೊಡನೆ ಅವರ ತಾಯಿ ಹೇಳಿದರು. 1949ರಲ್ಲಿ ಅವರು ಹತ್ತನೇ ತರಗತಿಯಿಂದ ತೇರ್ಗಡೆಯಾದರು. ಅನಂತರ ರಬ್ವದ ವಕಾಲತ್ ದೀವಾನ್‌ರ ನಿರ್ದೇಶನ ಪ್ರಕಾರ ಇಂಟರ್‌ವ್ಯೂಗಾಗಿ ರಬ್ವಗೆ ಹೋದರು. ಲಿಖಿತ ಪರೀಕ್ಷೆಯ ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಸ್ವತಃ ಅವರ ಇಂಟರ್‌ವ್ಯೂ ಮಾಡಿದರು. ಖಲೀಫತುಲ್ ಮಸೀಹ್‌ರ ನಿರ್ದೇಶನ ಪ್ರಕಾರ ಅವರ ಶಿಕ್ಷಣ ಮುಂದುವರೆಯಿತು. ಸ್ಕೂಲ್ ಮತ್ತು ಯೂನಿವರ್ಸಿಟಿಯ ಶಿಕ್ಷಣ ಪಡೆದರು. 1955ರಲ್ಲಿ ತಅ್‌ಲೀಮುಲ್ ಇಸ್ಲಾಂ ಕಾಲೇಜಿನಲ್ಲಿ ಅಧ್ಯಾಪಕರಾಗಿ ನಿಶ್ಚಯಿಸಲ್ಪಟ್ಟರು. ಗಣಿತಶಾಸ್ತ್ರ ವಿಭಾಗದ ಅಧ್ಯಕ್ಷರಾಗಿ ಸಹ ನಿಶ್ಚಯಿಸಲ್ಪಟ್ಟರು. ಅವರ ವಿವಾಹ 1960ರಲ್ಲಿ ಸರ್ಗೋಧಾದ ಸನ್ಮಾನ್ಯ ಅಬ್ದುಲ್ ಜಬ್ಬಾರ್ ಖಾನ್ ಸಾಹಿಬ್‌ರ ಮಗಳಾದ ರಝಿಯ ಖಾನಂ ಸಾಹಿಬರೊಂದಿಗೆ ನಡೆದಿತ್ತು. 1974ರ ವರೆಗೆ ರಬ್ವದ ಟಿ.ಐ. ಕಾಲೇಜ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರನ್ನು ನಾಝಿರ್ ಝಿಯಾಫತ್ ಆಗಿ ನಿಶ್ಚಯಿಸಿದರು. 1982ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಅವರನ್ನು ವಕೀಲುಲ್ ಅಲ್‌ಲಾ ತಹ್ರೀಕ್ ಜದೀದ್ ಆಗಿ ನಿಶ್ಚಯಿಸಿದರು. ಅದರೊಂದಿಗೆ ಕೆಲವು ಕಾಲದ ವರೆಗೆ ಅವರು ಎಡಿಶನಲ್ ಸದರ್ ಮಜ್ಲಿಸ್ ತಹ್ರೀಕ್ ಜದೀದ್ ಸಹ ಆಗಿದ್ದರು. 1989ರಲ್ಲಿ ಸದರ್ ಮಜ್ಲಿಸ್ ತಹ್ರೀಕ್ ಜದೀದ್ ಆಗಿ ನಿಶ್ಚಯಿಸಲ್ಪಟ್ಟರು ಮತ್ತು ಮರಣದ ವರೆಗೆ ಈ ಸೇವೆಯನ್ನು ಮಾಡುತ್ತಿದ್ದರು. ಅದಲ್ಲದೆ ಅವರು 1986ರಿಂದ ನಿಧನದ ತನಕ ಎಡಿಶನಲ್ ನಾಝಿರ್ ಅಲ್‌ಲಾ ಸಹ ಆಗಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರ ಕಾಲದಲ್ಲಿ ಅವರಿಗೆ ಅಮೀರ್ ಮಖಾಮಿಯಾಗುವ ಗೌರವ ಸಹ ಲಭಿಸಿತ್ತು. ರಬ್ವದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮಖಾಮಿಯಲ್ಲಿ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮರ್ಕಝಿಯದಲ್ಲಿ ಹಲವು ಪದವಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. 1969ರಿಂದ 1973ರ ವರೆಗೆ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮರ್ಕಝಿಯದ ಸದರ್ ಆಗಿ ಸಹ ಸೇವೆ ಸಲ್ಲಿಸಿದ್ದರು. ಆ ಕಾಲದಲ್ಲಿ ವಿಶ್ವಾದ್ಯಂತ ಒಂದೇ ಕೇಂದ್ರ ಖುದ್ದಾಮುಲ್ ಅಹ್ಮದಿಯಾ ಇತ್ತು. ಕೇಂದ್ರದಿಂದ ಅದರ ಕಂಟ್ರೋಲ್ ಇರುತ್ತಿತ್ತು. ಪ್ರತಿಯೊಂದು ದೇಶಕ್ಕೆ ಬೇರೆ ಬೇರೆ ಅಧ್ಯಕ್ಷರನ್ನು ನಿಶ್ಚಯಿಸಲಾಗುತ್ತಿರಲಿಲ್ಲ.

1970ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಇಜ್ತಿಮಾ ಖುದ್ದಾಮುಲ್ ಅಹ್ಮದಿಯಾ ಮರ್ಕಝಿಯದಲ್ಲಿ ಭಾಷಣ ಮಾಡುತ್ತಾ ಅವರ ಬಗ್ಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರೊಂದಿಗೆ ಕುಟುಂಬ ಸಂಬಂಧವಿಲ್ಲದ ಆದರೆ ಸುದೃಢವಾದ ಆಧ್ಯಾತ್ಮಿಕ ಸಂಬಂಧವಿರುವ ಒಬ್ಬ ನಿಷ್ಠಾವಂತ ಯುವಕನಿಗೆ ನಾನು ಖುದ್ದಾಮುಲ್ ಅಹ್ಮದಿಯಾದ ಅಧ್ಯಕ್ಷತೆಯನ್ನು ವಹಿಸಿಕೊಟ್ಟಿದ್ದೇನೆ. ಅಲ್ಲಾಹನು ಅವನಿಗೆ ಕೆಲಸ ಮಾಡುವ ಸೌಭಾಗ್ಯ ನೀಡಿದ್ದಾನೆ, ಅವನ ಪ್ರಯತ್ನಗಳನ್ನು ಅನುಗ್ರಹಿಸಿದ್ದಾನೆ ಮತ್ತು ನಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸಿದ್ದಾನೆ.

ಹಝ್ರತ್ ಅಮೀರುಲ್ ಮೂಅ್‌ಮಿನೀನ್ ಖಲೀಫತುಲ್ ಮಸೀಹ್ ಸಾಲಿಸ್(ರಹ್)ರ ಅಭಿಲಾಷೆ ಪ್ರಕಾರ ಚೌಧರಿ ಸಾಹಿಬ್‌ರ ಅಧ್ಯಕ್ಷತೆಯಲ್ಲಿ ಖುದ್ದಾಮುಲ್ ಅಹ್ಮದಿಯಾ ಪ್ರತಿಯೊಂದು ವಿಭಾಗದಲ್ಲಿ ಮಹತ್ತಾದ ಪ್ರಗತಿಯನ್ನು ಪಡೆದಿದೆ. 1974ರ ವಿಷಮ ಪರಿಸ್ಥಿತಿಗಳಲ್ಲಿ ಸಹ ಚೌಧರಿ ಸಾಹಿಬ್‌ರು ಹಝ್ರತ್ ಖಲೀಫತುಲ್ ಮಸೀಹ್‌ರ ನಿರ್ದೇಶನ ಪ್ರಕಾರ ಮುಖ್ಯವಾದ ಸೇವೆಗಳನ್ನು ಸಲ್ಲಿಸಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್ ಲಂಡನಿಗೆ ವಲಸೆ ಹೋದಾಗ ಅವರ ನಿರ್ದೇಶನ ಪ್ರಕಾರ ಲಂಡನಿಗೆ ಆಗಮಿಸಿದರು. ಒಂದು ವರ್ಷಕ್ಕಿಂತ ಹೆಚ್ಚಿನ ಕಾಲ ಲಂಡನಿನಲ್ಲಿದ್ದರು. ಲಂಡನಿನಲ್ಲೂ ಜಮಾಅತಿನ ಕೇಂದ್ರ ವ್ಯವಸ್ಥೆಯನ್ನು ಸ್ಥಾಪಿಸುವುದರಲ್ಲೂ ಮತ್ತು

ಅದನ್ನು ಸುವ್ಯವಸ್ಥೆಗೊಳಿಸುವುದರಲ್ಲೂ ಮುಖ್ಯವಾದ ಪಾತ್ರವನ್ನು ಅವರು ವಹಿಸಿದ್ದರು. 1982ರಿಂದ 1999ರ ತನಕ ಸದರ್ ಮಜ್ಲಿಸ್ ಅನ್ಸಾರುಲ್ಲಾಹ್ ಆಗಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಜೂಬಿಲಿ ಯೋಜನೆ ಸಮಿತಿಯ ಸದರ್ ಎಂಬ ನೆಲೆಯಲ್ಲೂ ಸೇವೆ ಸಲ್ಲಿಸಿದ್ದರು. ಅದಕ್ಕಿಂತ ಮುಂಚೆ ಶತವಾರ್ಷಿಕ ಜೂಬಿಲಿ ಯೋಜನೆ ಸಮಿತಿಯ ಸೆಕ್ರೆಟರಿಯಾಗಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. ಎಪ್ರಿಲ್ 2003ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್‌ರ ನಿಧನದ ಸಂದರ್ಭದಲ್ಲಿ ಖಿಲಾಫತಿನ ಚುನಾವಣಾ ಸಭೆಯ ಅಧ್ಯಕ್ಷತೆಯನ್ನು ವಹಿಸುವ ಗೌರವವನ್ನು ಪಡೆದಿದ್ದರು. ವಕೀಲುಲ್ ಅಅ್‌ಲಾ ಎಂಬ ನೆಲೆಯಲ್ಲಿ ಅವರು ಆಫ್ರಿಕ ಮತ್ತು ಯುರೋಪ್ ಸಮೇತ ಹಲವಾರು ದೇಶಗಳ ಪರ್ಯಟನೆ ಸಹ ಮಾಡಿದ್ದರು. 1973ರಲ್ಲಿ ಸನ್ಮಾನ್ಯ ಸಯ್ಯದ್ ಮೀರ್ ದಾವೂದ್ ಅಹ್ಮದ್ ಸಾಹಿಬ್‌ರ ನಿಧನದ ವೇಳೆ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹ್ಮಹುಲ್ಲಾಹ್‌ರವರು ಚೌಧರಿ ಸಾಹಿಬ್‌ರನ್ನು ಜಲ್ಸ ಸಾಲಾನದ ಆಫೀಸರರಾಗಿ ನಿಶ್ಚಯಿಸಿದ್ದರು. 1973ರಿಂದ ನಿಧನದ ತನಕ ಅವರು ಜಲ್ಸ ಸಾಲಾನ ಆಫೀಸರ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. 1991ರಲ್ಲಿ ಜಲ್ಸ ಸಾಲಾನ ಖಾದಿಯಾನಿನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರವರು ಅವರನ್ನು ಜಲ್ಸ ಸಾಲಾನ ಆಫೀಸರ್ ಆಗಿ ನಿಶ್ಚಯಿಸಿದ್ದರು. 1977ರಲ್ಲಿ ಅವರನ್ನು ರಬ್ವದ ಜಲ್ಸ ಸಾಲಾನ ಆಫೀಸರ್ ಅಲ್ಲದೆ ನಾಝಿರ್ ಝಿಯಾಫತ್ ಆಗಿಯೂ ನಿಶ್ಚಯಿಸಲಾಗಿತ್ತು. 1977ರಿಂದ 1987ರ ತನಕ ಅವರು ನಾಝಿರ್ ಝಿಯಾಫತ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಅವರು ತನ್ನ ಪತ್ನಿಯನ್ನಲ್ಲದೆ ಓರ್ವ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಪತ್ನಿ ಹೇಳುತ್ತಾರೆ: ಅವರಿಗೆ ಲಭಿಸುತ್ತಿದ್ದ ಅಲೌನ್ಸ್‌ನಿಂದ ಮೊತ್ತಮೊದಲು ಚಂದಾ ಬೇರೆ ಇರಿಸುತ್ತಿದ್ದರು ಎಂಬುದನ್ನು ನಾನು ವಿವಾಹದ ನಂತರ ನೋಡಿದ್ದೇನೆ. ಮೊದಲು ಚಂದಾ ಕೊಟ್ಟು ಅನಂತರ ಇತರ ಖರ್ಚುಗಳನ್ನು ಮಾಡಲು ಅವರು ನನ್ನೊಡನೆ ಸಹ ಸದಾ ಉಪದೇಶಿಸುತ್ತಿದ್ದರು. ನನ್ನೊಡನೆ ವಸಿಯ್ಯತ್ ಮಾಡಲು ಸಹ ಉಪದೇಶಿಸಿದ್ದರು. ಅವರು ತಹಜ್ಜುದ್ ನಿರ್ವಹಿಸುತ್ತಿದ್ದರು. ಮರಣದ ವರೆಗೆ ನಮಾಝ್‌ಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸುತ್ತಿದ್ದರು. ಬೇರೆಯವರ ತಪ್ಪುಗಳನ್ನು ಕಡೆಗಣಿಸುವ ಸ್ವಭಾವದವರಾಗಿದ್ದರು. ಕೃಪಾಳು ಪತಿಯಾಗಿದ್ದರು ಮತ್ತು ಮಕ್ಕಳಿಗೆ ಕರುಣಾಳು ತಂದೆಯಾಗಿದ್ದರು. ಸಂಬಂಧಿಕರಲ್ಲಿ ಯಾರೊಡನೆಯೂ ಕೋಪಗೊಳ್ಳುತ್ತಿರಲಿಲ್ಲ. ಸಂಧಾನದಲ್ಲಿ ಮೊದಲಿಗನಾಗುತ್ತಿದ್ದರು. ಸಕಲ ಗೌರವಗಳು ಅಲ್ಲಾಹನಿಗೆ ಎಂದು ಹೇಳುತ್ತಿದ್ದರು. ತನ್ನ ಸಹೋದರ ಸಹೋದರಿಯರು ಮತ್ತು ಇತರ ಸಂಬಂಧಿಕರ ಬಗ್ಗೆ ತುಂಬ ಕಾಳಜಿ ವಹಿಸುತ್ತಿದ್ದರು.

ಅವರ ಮಗಳು ಹೇಳುತ್ತಾಳೆ: ಎಂದಿಗೂ ನಮ್ಮ ತಾಯಿಯೊಂದಿಗೆ ಉಚ್ಚ ಸ್ವರದಲ್ಲಿ ಮಾತನಾಡುತ್ತಿರಲಿಲ್ಲ. ನಮ್ಮ ತಂದೆ, ಕೇವಲ ನಮ್ಮ ತಂದೆಯಾಗಿರಲಿಲ್ಲ ನಮ್ಮ ಸ್ನೇಹಿತರೂ ಆಗಿದ್ದರು. ರೂಮಿನಲ್ಲೇ ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ಆ ವೇಳೆಗಳಲ್ಲಿ ಅವರು ಪದೇ ಪದೇ ಮಾಡುತ್ತಿದ್ದ ಈ ಒಂದು ದುಆ ನನಗೆ ಈಗಲೂ ನೆನಪಿದೆ: "ಹೇ ಸರ್ವಶಕ್ತನಾದ ಅಲ್ಲಾಹ್, ಆಪತ್ತುಗಳಿಂದ ರಕ್ಷಿಸು." ನಮ್ಮ ತಂದೆ ನಮಗೆ ಪ್ರಾರ್ಥನೆಗಳ ಖಜಾನೆಯಾಗಿದ್ದರು.

(ಹುಝೂರ್ ಹೇಳುತ್ತಾರೆ:) ಅವರು ಯಥಾರ್ಥ ಅರ್ಥದಲ್ಲಿ ವಕ್ಫೆ ಝಿಂದಗಿಯ ಹಕ್ಕುಗಳನ್ನು ನೆರವೇರಿಸುವವರಾಗಿದ್ದರು. ಆಹಾರ ಪಾನೀಯ ಸೇವನೆ ಮತ್ತು ನಿದ್ದೆಯನ್ನು ಹೊರತುಪಡಿಸಿ ಉಳಿದ ಸಮಯಗಳಲ್ಲಿ ಕೇವಲ ಜಮಾಅತಿನ ಕೆಲಸಗಳನ್ನು ಮಾಡುತ್ತಿದ್ದರು. ಸಮಯವನ್ನು ವ್ಯರ್ಥ ಮಾಡುತ್ತಿರಲಿಲ್ಲ.

ಅವರ ಮಗನು ಬರೆಯುತ್ತಾರೆ: ಅವರು ಯಾವಾಗಲೂ ಎರಡು ಸಂಗತಿಗಳಿಗೆ ಒತ್ತು ನೀಡುತ್ತಿದ್ದರು. ನಮಾಝ್‌ಗಳನ್ನು ಮತ್ತು ಕಾಲಘಟ್ಟದ ಖಲೀಫರ ಖುತ್ಬಗಳನ್ನು ಎಂದಿಗೂ ಮಿಸ್ ಮಾಡಬಾರದು. ಖಲೀಫತುಲ್ ಮಸೀಹ್ ನೀಡುವ ಪ್ರತಿಯೊಂದು ನಿರ್ದೇಶನಗಳ ಪ್ರಕಾರ ನಡೆಯಬೇಕೆಂದೂ ಹೇಳುತ್ತಿದ್ದರು.

(ಹುಝೂರ್ ಹೇಳುತ್ತಾರೆ:) ಹೊರಗಿನ ಜಮಾಅತುಗಳಿಗೆ ಹೋಗಿ ಜನರನ್ನು ಭೇಟಿಯಾಗಿಕೊಂಡು ನನ್ನ ಸಲಾಂ ಮುಟ್ಟಿಸಲು ನಾನು ಎಲ್ಲ ನಾಝಿರ್‌ಗಳೊಡನೆ ಮತ್ತು ವಕೀಲ್‌ರೊಡನೆ ಹೇಳಿದಾಗ, ಚೌಧರಿ ಸಾಹಿಬ್‌ರು ಸಹ ಎರಡು ಸಲ ಹೋದರು. ಸರ್ ಗೋಧಾ ಜಿಲ್ಲೆಯನ್ನು ಅವರಿಗೆ ಒಪ್ಪಿಸಲಾಗಿತ್ತು. ಅವರು ಯಾವುದೇ ಮನೆಯನ್ನು ಬಿಡಲಿಲ್ಲ. ಪ್ರತಿಯೊಂದು ಮನೆಗೆ ಹೋಗಿ ನನ್ನ ಸಲಾಂ ತಲುಪಿಸಿದರು. ಅವರು ಹೀಗೆ ಹೇಳುತ್ತಿದ್ದರು: ಸಣ್ಣದು ಅಥವಾ ದೊಡ್ಡದಾದ ಯಾವುದೇ ಸಂಗತಿಯನ್ನು ಅಥವಾ ತಪ್ಪು ನಡೆದಿದ್ದರೂ ಸಹ ಖಲೀಫತುಲ್ ಮಸೀಹ್‌ರಿಗೆ ತಿಳಿಸಬೇಕು. ಖಂಡಿತವಾಗಿಯೂ ಖಲೀಫತುಲ್ ಮಸೀಹ್‌ರಿಗೆ ತಿಳಿಸಬೇಕು. ಇದರಿಂದ ದುಆ ಆಗುತ್ತದೆ ಸುಧಾರಣೆಯೂ ಆಗುತ್ತದೆ. ಕೆಲವು ಸಲ ಪರ್ಯಟನೆಯ ಸಂದರ್ಭದಲ್ಲಿ ಕೆಲವು ಜಮಾಅತುಗಳು ಅವರೊಡನೆ ಭಾಷಣ ಮಾಡಲು ವಿನಂತಿಸುತ್ತಾರೆ. ಆಗ ಅವರು ಹೀಗೆ ಹೇಳಿಕೊಂಡು ನಿರಾಕರಿಸುತ್ತಿದ್ದರು: ನನಗೆ ಆದೇಶಿಸಲ್ಪಟ್ಟದ್ದನ್ನು ಮಾತ್ರ ನಾನು ಮಾಡುವೆನು.

ಲಯೀಖ್ ಆಬಿದ್ ಸಾಹಿಬ್ ಬರೆಯುತ್ತಾರೆ: ಸಣ್ಣ ಸಣ್ಣ ವಿಷಯಗಳಲ್ಲೂ ಬಹಳ ಮುನ್ನೆಚ್ಚರಿಕೆ ವಹಿಸುತ್ತಿದ್ದರು. ಯಾವುದಾದರೂ ಡ್ರಾಫ್ಟ್ ಅಥವಾ ಬಿಲ್ ಅಥವಾ ಪತ್ರ, ಅವುಗಳನ್ನು ಪೂರ್ಣವಾಗಿ ಓದದೆ ಸಹಿ ಮಾಡುತ್ತಿರಲಿಲ್ಲ. ಇದು ಅಧಿಕಾರಿಗಳಿಗೆ ಇರಬೇಕಾದ ಆವಶ್ಯಕ ಗುಣವಾಗಿದೆ. ಸರಿಯಾಗಿ ನೋಡದೆ ಸಹಿ ಮಾಡಬಾರದು. ಸಮಯ ನಿಷ್ಠೆಯನ್ನು ಹೊಂದಿದ್ದರು. ಪ್ರತಿಯೊಂದು ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡುವುದರಲ್ಲಿ ಎಷ್ಟು ಕರಾರುವಕ್ಕಾಗಿದ್ದರು ಎಂದರೆ, ಸಮಯದ ಮೇಲೆ ಸವಾರರಾಗಿಕೊಂಡು ಅದನ್ನು ಬಯಸಿದಂತೆ ತಿರುಗಿಸಲು ಬಲ್ಲರೆಂಬಂತೆ ತೋಚುತ್ತಿತ್ತು. ಇಷ್ಟು ಸಮಯ ಪಾಲನೆಯನ್ನು ಹೊಂದಿದ್ದರೂ ಮರ್ಯಾದಸ್ಥರಾಗಿದ್ದರು. ಮಸೀದಿಯಲ್ಲಿ ನಮಾಝಿಗೆ ಹೋದರೆ ದೇವಸ್ಮರಣೆಯಲ್ಲಿ ಮಗ್ನರಾಗುತ್ತಿದ್ದರು.

ಸಮೀಉಲ್ಲಾಹ್ ಸಿಯಾಲ್ ಸಾಹಿಬ್ ಹೇಳುತ್ತಾರೆ: ತನ್ನ ಗುಣವೈಶಿಷ್ಟ್ಯಗಳ ದೃಷ್ಟಿಯಲ್ಲಿ ಅವರು ಒಬ್ಬ ಮಹಾನುಭಾವರಾಗಿದ್ದರು. ಸಹಾನುಭೂತಿ ಹೊಂದಿದ್ದ,

ಧೈರ್ಯಶಾಲಿಯಾದ, ಸದಾ ದೀನಿನ ಸೇವೆ ಮಾಡುವ ಮತ್ತು ಖಿಲಾಫತಿನೊಂದಿಗೆ ಅಪಾರವಾದ ಪ್ರೇಮವನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಹೊಸದಾಗಿ ಬರುವ ವಖ್ಫೇ ಝಿಂದಗಿಯರನ್ನು ಅತ್ಯಂತ ಉತ್ತಮ ರೀತಿಯಲ್ಲಿ ತರಬೇತಿ ಮಾಡುತ್ತಿದ್ದರು.

ಹಲೀಂ ಖುರೈಶಿ ಸಾಹಿಬ್ ಬರೆಯುತ್ತಾರೆ: ಆಡಳಿತ ಮತ್ತು ಆರ್ಥಿಕ ವಿಷಯಗಳಲ್ಲಿ ಅವರು ಬಹಳ ಕಟ್ಟುನಿಟ್ಟಾಗಿದ್ದರು. ಕಳಪೆ ಅಥವಾ ತಪ್ಪು ನಿರ್ವಹಣೆಯನ್ನು ಸಹಿಸುತ್ತಿರಲಿಲ್ಲ. ಆರ್ಥಿಕ ವಿಷಯಗಳ ಮೇಲೆ ಆಳವಾದ ದೃಷ್ಟಿಯಿರಿಸುತ್ತಿದ್ದರು ಮತ್ತು ಬೆಲೆಗಳ ಬಗ್ಗೆ ಅಪ್‌ಡೇಟ್ ಪಡೆಯುತ್ತಿದ್ದರು. ಯಾವುದಾದರೂ ಬಿಲ್‌ನಲ್ಲಿ ಹತ್ತು ರೂಪಾಯಿ ಕೂಡ ಹೆಚ್ಚಿಗೆ ಇದ್ದರೂ ಅದರ ಬಗ್ಗೆ ಅನ್ವೇಷಿಸುತ್ತಿದ್ದರು. ಇಂತಿಂತಹ ಅಂಗಡಿಯಲ್ಲಿ ಇದರ ಬೆಲೆ ನೂರು ರೂಪಾಯಿ ಇರುವಾಗ ನೀವು ನೂರ ಹತ್ತು ರೂಪಾಯಿ ಏಕೆ ಖರ್ಚು ಮಾಡಿದಿರಿ ಎಂದು ಕೇಳುತ್ತಿದ್ದರು.

ಲಂಡನಿನ ವಕೀಲುಲ್ ತಬ್‌ಶೀರ್ ಆದ ಮಾಜಿದ್ ತಾಹಿರ್ ಸಾಹಿಬ್ ಬರೆಯುತ್ತಾರೆ: ಅವರು ಸಮಯದ ಪ್ರತಿಕ್ಷಣವನ್ನು ಧರ್ಮದ ಸೇವೆಗಾಗಿ ಖರ್ಚು ಮಾಡಿದ್ದರು. ಆಫೀಸಿನ ಹಲವು ವಿಷಯಗಳ ಕೆಲಸಗಳಲ್ಲಿ ಖಲೀಫತುಲ್ ಮಸೀಹ್‌ರಿಂದ ಚೌಧರಿ ಸಾಹಿಬ್‌ರಿಗೆ ತಲುಪಿಸಲಾಗುವ ಪ್ರತಿಯೊಂದು ನಿರ್ದೇಶನದ ಮೇಲೆ ತಡಮಾಡದೆ ಕೆಲಸ ನಿರ್ವಹಿಸುತ್ತಿದ್ದರು. ಖಂಡಿತವಾಗಿಯೂ ಖಲೀಫತುಲ್ ಮಸೀಹ್‌ರ ಅಧೀನದಲ್ಲಿ ಇದ್ದುಕೊಂಡೇ ಅವರ ಪ್ರತಿಯೊಂದು ಕೆಲಸ ನಡೆಯುತ್ತಿತ್ತು. ಜಮಾಅತಿನ ನಿಯಮಗಳು ಬರೆಯಲಾಗಿದೆ, ಅದರ ಪ್ರಕಾರವೇ ನಡೆಯಬೇಕೆಂದು ಹೇಳಿಕೊಂಡು ಯಾರು ಜಮಾಅತಿನ ನಿಯಮಗಳನ್ನು ಖಲೀಫತುಲ್ ಮಸೀಹ್‌ರ ಹೇಳಿಕೆಗಿಂತ ಮೇಲೆ ಎಂದು ಭಾವಿಸುತ್ತಿದ್ದರೋ ಅವರೊಡನೆ ಅವರು ಹೀಗೆ ಹೇಳುತ್ತಿದ್ದರು: ಖಲೀಫತುಲ್ ಮಸೀಹ್ ನೀಡುವ ನಿರ್ದೇಶನಗಳ ಪ್ರಕಾರ ನಡೆಯಿರಿ. ಇದೇ ನಿಮಗಿರುವ ನಿಯಮವಾಗಿದೆ.

ಮುಬಾರಕ್ ಸಿದ್ದೀಖ್ ಸಾಹಿಬ್ ಬರೆಯುತ್ತಾರೆ: ಒಮ್ಮೆ ಟಿ.ಐ. ಕಾಲೇಜಿನೊಂದಿಗೆ ಮೀಟಿಂಗ್ ನಡೆಯುವ ಸಂದರ್ಭದಲ್ಲಿ ನಾನು ಅವರೊಡನೆ ಹೇಳಿದೆ: ಅಲ್ಲಾಹನು ನಿಮಗೆ ದೀರ್ಘ ಕಾಲ ಸೇವೆ ಮಾಡಲು ಸೌಭಾಗ್ಯ ನೀಡಿದ್ದಾನೆ ಮತ್ತು ಗೌರವಗಳನ್ನು ಪ್ರದಾನಿಸಿದ್ದಾನೆ. ನಮಗೆ ಈ ಯಶಸ್ಸಿನ ರಹಸ್ಯವನ್ನು ತಿಳಿಸಿರಿ, ನಮಗೆ ಏನಾದರೂ ಉಪದೇಶ ನೀಡಿರಿ. ಆಗ ಅವರು ಹೇಳಿದರು: ಅದರ ರಹಸ್ಯ ಒಂದೇ ಆಗಿದೆ. ಸ್ವಂತ ಅರಿವು ಮತ್ತು ಸ್ವಂತ ಬುದ್ಧಿಯನ್ನು ತುಚ್ಛವೆಂದು ತಿಳಿದುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ಖಲೀಫತುಲ್ ಮಸೀಹ್‌ರನ್ನು ಅನುಸರಿಸಬೇಕು. ಅನುಸರಣೆಯ ಹಕ್ಕನ್ನು ಈಡೇರಿಸುವುದರಲ್ಲಿ ಪರಿಪೂರ್ಣವಾದ ಪ್ರಯತ್ನ ನಡೆಸಿದ್ದೇನೆ ಎಂದು ಹೃದಯ ಸಾಕ್ಷ್ಯವಹಿಸುವ ರೀತಿಯಲ್ಲಿ ಅನುಸರಿಸಬೇಕು.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಖಿಲಾಫತಿಗೆ ಅವರಂತಹ ಸಮರ್ಥ ಸಹಾಯಕರು ಲಭಿಸುತ್ತಿರಲಿ. ಪಾಕಿಸ್ತಾನದ ಸ್ಥಿತಿಗತಿಗಳ ಬಗ್ಗೆ ಸಹ ದುಆ ಮಾಡುತ್ತಿರಿ. ಪಾಕಿಸ್ತಾನದ ಅವಸ್ಥೆಗಳನ್ನು ಅಲ್ಲಾಹನು ಬೇಗನೇ ಬದಲಿಸಲಿ. ಅಲ್ಲಿನ ಅಹ್ಮದಿಯರಿಗೆ ಸ್ವತಂತ್ರವಾಗಿ ಜೀವನ ಸಾಗಿಸಲು ಸೌಭಾಗ್ಯ ಸಿಗಲಿ.

ಮತ್ತೊಂದು ಮುಖ್ಯವಾದ ವಿಷಯ ನಾನು ಹೇಳಬಯಸುವುದೇನೆಂದರೆ, ಈಗ ಲೋಕದೆಲ್ಲೆಡೆ ವ್ಯಾಪಿಸಿರುವ ಕೊರೋನ ವ್ಯಾಧಿಗೆ ಸಂಬಂಧಪಟ್ಟಂತೆ ಅಹ್ಮದಿಯರು ಸಹ ತಮ್ಮ ಜವಾಬ್ದಾರಿಕೆಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸುತ್ತಿಲ್ಲ. ಯು.ಕೆ.ಯಲ್ಲೂ ಅಮೇರಿಕದಲ್ಲೂ ಪಾಕಿಸ್ಥಾನದಲ್ಲೂ ಅದೇರೀತಿ ಇತರ ದೇಶಗಳಲ್ಲೂ ಪಾಲಿಸುತ್ತಿಲ್ಲ. ಬಹಳ ಜಾಗರೂಕರಾಗಿರಬೇಕಾದ ಅಗತ್ಯವಿದೆ. ಮಾಸ್ಕ್ ಧರಿಸುತ್ತಿರಬೇಕು. ಕೆಲವರು ಮಾಸ್ಕ್ ಧರಿಸುತ್ತಾರೆ, ಆದರೆ ಮೂಗು ಮುಚ್ಚುವುದಿಲ್ಲ. ಕೆಲವರ ಮಾಸ್ಕ್ ಗಡ್ಡದ ಕೆಳಗೆ ಇರುತ್ತದೆ. ಈ ರೀತಿ ಮಾಸ್ಕ್ ಧರಿಸುವುದರಿಂದ ಏನು ಪ್ರಯೋಜನ? ಆದುದರಿಂದ ಮಾಸ್ಕ್ ಧರಿಸುವಾಗ ಬಾಯಿ ಮತ್ತು ಮೂಗು ಮುಚ್ಚಿಕೊಂಡಿರಬೇಕು.

ಅದೇ ರೀತಿ ಜನರು ಸಾಮಾಜಿಕ ಅಂತರ (Social distance) ಸಹ ಪಾಲಿಸುವುದಿಲ್ಲ. ಸರಕಾರಗಳು ನಿರ್ದೇಶಿಸುವ ಸೂಚನೆಗಳನ್ನು ಪಾಲಿಸುವುದಿಲ್ಲ. ಆದುದರಿಂದ ನಾವು ಈ ಎಲ್ಲ ಸಂಗತಿಗಳ ಕಡೆಗೆ ಗಮನ ಹರಿಸಿ ಅತ್ಯಂತ ಜಾಗರೂಕತೆಯಿಂದ ಇರಬೇಕಾದುದು ಅವಶ್ಯಕವಾಗಿದೆ. ಇಲ್ಲವಾದಲ್ಲಿ ಈ ಮಹಾಮಾರಿ ಹೀಗೇ ಒಬ್ಬರಿಂದೊಬ್ಬರಿಗೆ ಹರಡುತ್ತಾ ಹೋಗುವುದು.

ಮತ್ತೊಂದು ವಿಷಯ, ಈ ವೇಳೆಯಲ್ಲಿ ನಾವು ಯಾತ್ರೆಗಳನ್ನು ಸಾಧ್ಯವಾದಷ್ಟು ಕಡಿಮೆಗೊಳಿಸಲು ಪ್ರಯತ್ನಿಸಬೇಕು. ಅನಗತ್ಯವಾದ ಯಾತ್ರೆಗಳನ್ನು ತ್ಯಜಿಸಬೇಕು.

ಅಂತೂ ಅಲ್ಲಾಹನು ಈ ಮಹಾಮಾರಿಯನ್ನು ಬೇಗನೇ ದೂರಗೊಳಿಸಲಿ. ರೋಗ ಬಾಧಿತರಾದ ಅಹ್ಮದಿಯರಿಗೂ ಅಹ್ಮದಿಯರಲ್ಲದ ಇತರರಿಗೂ ಅಲ್ಲಾಹನು ಉಪಶಮನ ನೀಡುವಂತಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 12-02-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon